# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

'ಕನ್ನಡ ಕಾಯಕ ವರ್ಷಾಚರಣೆ' ೧ನೇ ನವೆಂಬರ್ ೨೦೨೦ ರಿಂದ ೩೧ನೇ ಅಕ್ಟೋಬರ್ ೨೦೨೧ ರವರೆಗೆ

ದಿನಾಂಕ: **25–06–2021** ರಂದು ಅಪರಾಹ್ನ **2:30** ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ನಡೆದ 17ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಎಸ್. ವಿದ್ಯಾಶಂಕರ್**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಪ್ರೊ. ರಾಜಣ್ಣ .ಆರ್.**<br>ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿಗಳು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಪ್ರೊ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ)<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗು ಸದಸ್ಯರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಡಾ. ಮಹಾದೇವನ್ .ಕೆ.ಎಂ.**<br>ಕುಲಸಚಿವ (ಪರೀಕ್ಷಾಂಗ) ಹಾಗು ಸದಸ್ಯರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಡಾ. ಷಣ್ಮುಖ**<br>ಡೀನ್ (ಅಧ್ಯಯನ ಕೇಂದ್ರಗಳು),<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಡಾ. ಲಕ್ಷ್ಮಿ .ಎನ್.**<br>ಮುಖ್ಯಸ್ಥರು, ಶಿಕ್ಷಣಶಾಸ್ತ್ರ ಅಧ್ಯಯನ ಹಾಗು ಸಂಶೋಧನಾ ವಿಭಾಗ<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | |
| **ವಿಶೇಷ ಆಹ್ವಾನಿತರು** | |
| **ಡಾ. ನಿರಂಜನ್ ರಾಜ್**<br>**CIQA ನಿರ್ದೇಶಕರು**<br>ಕರಾಮುವಿ, ಮೈಸೂರು. | **ಡಾ. ಹೆಚ್. ರಾಜೇಶ್ವರಿ**<br>**ವಿಶೇಷಾಧಿಕಾರಿ – ಡೀನ್ (ಶೈಕ್ಷಣಿಕ)**<br>ಕರಾಮುವಿ, ಮೈಸೂರು. |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ, 17ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಲು ಡೀನ್ (ಶೈಕ್ಷಣಿಕ) ಅವರಿಗೆ ಸೂಚಿಸಿದರು.

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 17.01

ವಿಷಯ : 2020–21ನೇ ಸಾಲಿನ January Cycle (February-March) ನ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ವಿವರಣಾ ಪುಸ್ತಕಗಳನ್ನು ಸಿದ್ಧಪಡಿಸಿ ವೆಬ್‌ಸೈಟ್ **www.ksoumysuru.ac.in** ನಲ್ಲಿ ಪ್ರಕಟಿಸಿರುವ ಬಗ್ಗೆ ಅನುಸಮರ್ಥನೆ ಕೋರಿ.

****

2020–21ನೇ ಸಾಲಿನ January Cycle (February-March) ನ ಪ್ರವೇಶಾತಿ ಪ್ರಾರಂಭಿಸುವ ಸಲುವಾಗಿ ಈ ಕೆಳಕಂಡ ಕಾರ್ಯಕ್ರಮಗಳ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ವಿವರಣಾ ಪುಸ್ತಕಗಳನ್ನು ನಿಯಾಮನುಸಾರ ಸಿದ್ಧಪಡಿಸಿ ವಿವಿನಿಲಯದ ವೆಬ್‌ಸೈಟ್ **www.ksoumysuru.ac.in** ನಲ್ಲಿ ಪ್ರಕಟಿಸಲಾಗಿದೆ.

1. **B.A, B.Com and B.Lib.I.Sc**
2. **B.Ed**
3. **M.A:** Kannada, English, Hindi, Sanskrit, Urdu, History, Economics, Political Science, Public Administration, Sociology, Ancient History and Archeology, Journalism and Mass Communication
4. **M.Com**
5. **M.Sc.:** Bio-Chemistry, Bio-Technology, Chemistry, Clinical Nutrition and Dietetics, Environmental Science, Computer Science, Geography, Information Science, Mathematics, Microbiology, Physics, Psychology
6. **M.Lib.I.Sc** Programme
7. **MBA** Programme
8. **Graduation Based Diploma Programmes:** Graduation Based Diploma in English (GBDE), Graduation Based Diploma in Communicative English (GBDCE), Graduation Based Diploma in Human Resource Management (GBDHRM), Graduation Based Diploma in Financial Management (GBDFM), Graduation Based Diploma in Business Administration (GBDBA), Graduation Based Diploma in Marketing Management (GBDMM), Graduation Based Diploma in Nutrition and Deitetics (GBDND), Graduation Based Diploma in Journalism and Mass Communication (GBDJMC), Graduation Based Diploma in Kuvempu Sahithya (GBDKS), Graduation Based Diploma in Business Law (GBDBL), Graduation Based Diploma in Information Technology (GBDIT), Graduation Based Diploma in Computer Application (GBDCA), Graduation Based Diploma in Ambedkar Studies (GBDAS)
9. **Diploma Programmes :** Diploma in Kannada (DIK), Diploma in Journalism (DIJ), Diploma in Nutrition and Health Education (DNHE), Diploma in Information Technology (DIT), Diploma in Computer Application (DCA)
10. **Certificate Programmes:** Certificate in Kannada (CIK), Certificate in Panchayath Raj (CPR), Certificate in Nutrition and Food (CNF), Certificate in Information Communication Technology (CICT)

ಪ್ರತಿಯೊಂದು ಕಾರ್ಯಕ್ರಮದ ಪ್ರವೇಶಾತಿ ಅರ್ಹತೆಯನ್ನು ಆಯಾ ಅಧ್ಯಾದೇಶಗಳ ಪ್ರಕಾರ ಸಿದ್ಧಪಡಿಸಲಾಗಿದೆ. ಸದರಿ ವಿವರಣಾ ಪುಸ್ತಕಗಳನ್ನು ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ವಿವಿ ನಿಲಯದ ವೆಬ್‌ಸೈಟ್ www.ksoumysuru.ac.in ನಲ್ಲಿ ಪ್ರಕಟಿಸಲಾಗಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಮುಂದೆ ಅನುಸಮರ್ಥನೆ ಕೋರಿ ವಿಷಯ ಮಂಡಿಸಿದೆ. (ಪ್ರತಿ ಲಗತ್ತಿಸಲಾಗಿದೆ).

ಕುಲಸಚಿವರು

ಕುಲಪತಿಗಳು

ತೀರ್ಮಾನ : **2020–21ನೇ ಸಾಲಿನ January Cycle (February-March) ನ ಪ್ರವೇಶಾತಿ ಪ್ರಾರಂಭಿಸುವ ಸಲುವಾಗಿ ಈ ಮೇಲ್ಕಂಡ ಕಾರ್ಯಕ್ರಮಗಳ ವಿವರಣಾ ಪುಸ್ತಕಗಳನ್ನು ನಿಯಮಾನುಸಾರ ಸಿದ್ಧಪಡಿಸಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.ksoumysuru.ac.in ನಲ್ಲಿ ಪ್ರಕಟಿಸಲಾಗಿರುವುದನ್ನು ಹಾಗು ಪ್ರವೇಶಾತಿ ಆರಂಭಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು.**

## ವಿಷಯ ಸಂಖ್ಯೆ: 17.02

ವಿಷಯ : 2020–21ನೇ ಸಾಲಿನ January Cycle (February-March) ನ ಆವೃತ್ತಿಯಲ್ಲಿ ಹೊಸದಾಗಿ ಪ್ರಾರಂಭಿಸಲಾಗಿರುವ Certificate in Information Communication Technology (CICT) ಕೋರ್ಸ್‌ಗೆ ಪ್ರವೇಶಾತಿ ಶುಲ್ಕ ನಿಗದಿಪಡಿಸಿರುವ ಬಗ್ಗೆ.

****

2020–21ನೇ ಸಾಲಿನ January Cycle (February-March) ನ ಆವೃತ್ತಿಯಲ್ಲಿ ಹೊಸದಾಗಿ ಪ್ರಾರಂಭಿಸಲಾಗಿರುವ Certificate in Information Communication Technology (CICT) ಕೋರ್ಸ್‌ಗೆ ಪ್ರವೇಶಾತಿ ಶುಲ್ಕ ರೂ.3,000/– ಗಳು ಮತ್ತು ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಬೆಳ್ಳಿ ಹಬ್ಬದ ವಿಶೇಷ ಶುಲ್ಕ ರೂ.300/– ಗಳು ಸೇರಿದಂತೆ ಒಟ್ಟು ರೂ.3,300/– ಗಳನ್ನು ನಿಗದಿಪಡಿಸಿ ವಿದ್ಯಾರ್ಥಿಗಳಿಂದ ಪಡೆಯಲು ಕ್ರಮವಹಿಸಲಾಗಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಮುಂದೆ ಅನುಸಮರ್ಥನೆ ಕೋರಿ ವಿಷಯ ಮಂಡಿಸಿದೆ.

ತೀರ್ಮಾನ : **ಸದರಿ ವಿಷಯಕ್ಕೆ ಅನುಸಮರ್ಥನೆ ನೀಡಲಾಯಿತು.**

## ವಿಷಯ ಸಂಖ್ಯೆ: 17.03

ವಿಷಯ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಸ್ಥಾಪಿಸಲು ಉದ್ದೇಶಿಸಿರುವ 04 ಅಧ್ಯಯನ ಪೀಠಗಳ ಕರಡು ಪರಿನಿಯಮ ಅನುಮೋದನೆ ಮತ್ತು ಕಾರ್ಪಸ್ ಫಂಡ್ ನಿಗದಿಪಡಿಸುವ ಬಗೆಗೆ.

ಉಲ್ಲೇಖ : ದಿನಾಂಕ: 06–03–2021 ರಂದು ನಡೆದ 164ನೇ ವ್ಯವಸ್ಥಾಪನಾ ಮಂಡಳಿಯ ಸಭೆ ನಿರ್ಣಯ.

******

ಮೇಲ್ಕಂಡ ವಿಷಯ ಹಾಗು ಉಲ್ಲೇಖಕ್ಕೆ ಸಂಬಂಧಿಸಿದಂತೆ, ದಿನಾಂಕ: 06–03–2021 ರಂದು ನಡೆದ 164ನೇ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿನ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾದ ವಿಷಯದಲ್ಲಿ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗು ರಾಜಕೀಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ಗಣ್ಯ ವ್ಯಕ್ತಿಗಳ ವಿಚಾರಗಳನ್ನು ಪ್ರಚುರ ಪಡಿಸುವ ಹಿತದೃಷ್ಟಿಯಿಂದ ಹೆಚ್ಚಿನ ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಉದ್ದೇಶಿತ ವಿಷಯವು ಚರ್ಚಿತವಾಗಿದ್ದು, ಗಣ್ಯ ವ್ಯಕ್ತಿಗಳ ಹೆಸರಿನಲ್ಲಿ ಅಧ್ಯಯನ ಪೀಠಗಳನ್ನು ಸ್ಥಾಪಿಸುವಂತೆ ನಿರ್ಣಯಿಸಲಾಗಿದ್ದ ನಿಟ್ಟಿನಲ್ಲಿ, ಪೀಠಗಳಿಗೆ ಸಂಬಂಧಿಸಿದ ಕರಡು ಪರಿನಿಯಮವನ್ನು ಸಿದ್ಧಪಡಿಸಿದೆ. (ಪ್ರತಿ ಲಗತ್ತಿಸಲಾಗಿದೆ)

1. ಪದ್ಮಭೂಷಣ ಡಾ. ಬಾಲಗಂಗಾಧರನಾಥ ಸ್ವಾಮಿಜಿ, ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಠ
2. ಪದ್ಮಭೂಷಣ ಡಾ. ಶಿವಕುಮಾರ ಸ್ವಾಮಿಜಿ, ಶ್ರೀ ಕ್ಷೇತ್ರ ಸಿದ್ಧಗಂಗಾ ಮಠ
3. ಶ್ರೀ. ಅನಂತಕುಮಾರ, ಮಾಜಿ ಮಂತ್ರಿಗಳು, ಕೇಂದ್ರ ಸರ್ಕಾರ
4. ಹೆಚ್. ಜಗದ್ಗುರು ಡಾ. ಶ್ರೀ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು, ಸುತ್ತೂರು ಮಠ

ಕುಲಸಚಿವರು ಕುಲಪತಿಗಳು

ಅ) ಸದರಿ ಕರಡು ಪರಿನಿಯಮಕ್ಕೆ ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಅವಶ್ಯವಾಗಿರುತ್ತದೆ. ಶಾಸನಬದ್ಧ ಪ್ರಾಧಿಕಾರಗಳ ಅನುಮೋದನೆ ಪಡೆದ ನಂತರ ಸದರಿ ಪರಿನಿಯಮಗಳಿಗೆ ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ.

ಆ) ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿತವಾಗಿರುವ ಇತರೆ ಪೀಠಗಳಿಗೆ ಕಾರ್ಪಸ್ ಫಂಡ್ ತಲಾ ರೂ.15 ಲಕ್ಷ ಗಳನ್ನು ಕಾಯ್ದಿರಿಸಿದೆ. ಅದರಂತೆ, ಸದರಿ 04 ಪೀಠಗಳಿಗೆ ಕಾರ್ಪಸ್ ಫಂಡ್ ನಿಗದಿಪಡಿಸುವ ವಿಚಾರಗಳಲ್ಲಿ ಶೈಕ್ಷಣಿಕ ಮಂಡಳಿ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

**<u>ಚರ್ಚೆ</u> : ಸರ್ಕಾರದಿಂದ ಪರಿನಿಯಮಗಳು ಅನುಮೋದನೆಯಾದ ನಂತರ ಕಾರ್ಪಸ್ ಫಂಡ್ ನಿಗದಿಗೊಳಿಸಬಹುದಾಗಿದೆ ಎಂದು ಹಣಕಾಸು ಅಧಿಕಾರಿಗಳು ಅಭಿಪ್ರಾಯಪಟ್ಟರು. ಪೀಠಗಳ ವತಿಯಿಂದ ಹೆಚ್ಚಿನ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ನಡೆಯಬೇಕೆಂದು ಮಾನ್ಯ ಕುಲಸಚಿವರು ಅಭಿಪ್ರಾಯಪಟ್ಟರು.**

**<u>ತೀರ್ಮಾನ</u> : ಸದರಿ ಪರಿನಿಯಮಗಳನ್ನು ಒಪ್ಪಲಾಯಿತು. ಸದರಿ ಪರಿನಿಯಮಗಳನ್ನು ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯೊಂದಿಗೆ ಸರ್ಕಾರದ ಮುಖಾಂತರ ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಲು ಒಪ್ಪಲಾಯಿತು.**

## ವಿಷಯ ಸಂಖ್ಯೆ: 17.04

**ವಿಷಯ :** ನೂತನವಾಗಿ ಪ್ರಾರಂಭಿಸಲು ಉದ್ದೇಶಿಸಿರುವ BBA ಶೈಕ್ಷಣಿಕ ಕಾರ್ಯಕ್ರಮದ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿ (CBCS) ಪಠ್ಯಕ್ರಮವನ್ನು ಅನುಮೋದಿಸುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ, BBA ಶಿಕ್ಷಣಕ್ರಮವನ್ನು ಪ್ರಾರಂಭಿಸಲು ಉದ್ದೇಶಿಸಿ UGC ಗೆ ಈಗಾಗಲೇ PPR ಸಲ್ಲಿಸಿ, ಅನುಮೋದನೆ ನಿರೀಕ್ಷೆಯಲ್ಲಿರುತ್ತೇವೆ. ಈ ಹಿನ್ನೆಲೆಯಲ್ಲಿ ಪೂರ್ವಯೋಜಿತವಾಗಿ ಸದರಿ ಶಿಕ್ಷಣಕ್ರಮಕ್ಕೆ ಆಯ್ಕೆ ಆಧಾರಿತ ಕಲಿಕಾ ಪದ್ಧತಿ (CBCS) ಮಾದರಿಯಲ್ಲಿ ಪಠ್ಯಕ್ರಮವನ್ನು ರಚಿಸಿ, BOS ಅನುಮೋದನೆ ಪಡೆಯಲಾಗಿದೆ. ಸದರಿ ಪಠ್ಯಕ್ರಮಕ್ಕೆ ನಿಯಮದಂತೆ, ಶಾಸನಬದ್ಧ ಪ್ರಾಧಿಕಾರಗಳಾದ ಶೈಕ್ಷಣಿಕ ಮಂಡಳಿಯಲ್ಲಿ ಅನುಮೋದನೆ ಪಡೆಯುವ ನಿಟ್ಟಿನಲ್ಲಿ ಚರ್ಚೆ ಮತ್ತು ನಿರ್ಣಯಕ್ಕೆ ಮಂಡಿಸಿದೆ. (ಪ್ರತಿ ಲಗತ್ತಿಸಲಾಗಿದೆ).

**<u>ತೀರ್ಮಾನ:</u> ನೂತನವಾಗಿ ಪ್ರಾರಂಭಿಸಲು ಉದ್ದೇಶಿಸಿರುವ BBA ಶೈಕ್ಷಣಿಕ ಕಾರ್ಯಕ್ರಮದ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿ (CBCS) ಪಠ್ಯಕ್ರಮವನ್ನು ಅನುಮೋದಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 17.05

**ವಿಷಯ : ಸ್ನಾತಕ/ ಸ್ನಾತಕೋತ್ತರ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿ (CBCS) ಅಳವಡಿಸಿದ ನೂತನ ಪಠ್ಯಕ್ರಮವನ್ನು ಅನುಮೋದಿಸುವ ಬಗ್ಗೆ.**

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಆಯ್ಕೆ ಆಧಾರಿತ ಕಲಿಕಾ ಪದ್ಧತಿ (CBCS) ಯನ್ನು 2021–22 ರ ಜುಲೈ ಆವೃತ್ತಿಯಿಂದ ಅಳವಡಿಸಿಕೊಳ್ಳುವ ಸಂಬಂಧ ಎಂ.ಎ. ಉರ್ದು, ಎಂ.ಎ. ತೆಲುಗು, ಎಂ.ಎ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಎಂ.ಎ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ, ಎಂಬಿಎ, ಬಿಲಿಬ್‌ಐಎಸ್ಸಿ, ಎಂಲಿಬ್‌ಐಎಸ್ಸಿ, ಎಂ.ಎಸ್ಸಿ. ಪರಿಸರ ವಿಜ್ಞಾನ, ಎಂ.ಎಸ್ಸಿ. ಭೌತಶಾಸ್ತ್ರ, ಬಿ.ಎಸ್ಸಿ. ಸಸ್ಯಶಾಸ್ತ್ರ, ಬಿ.ಎಸ್ಸಿ. ಭೌತಶಾಸ್ತ್ರ, ಬಿ.ಎಸ್ಸಿ. ಸೂಕ್ಷ್ಮಜೀವಶಾಸ್ತ್ರ, ಎಂ.ಎಸ್ಸಿ. ಸಸ್ಯಶಾಸ್ತ್ರ, ಎಂ.ಎಸ್ಸಿ. ಆಹಾರ ವಿಜ್ಞಾನ ಮತ್ತು ಪೌಷ್ಠಿಕತೆ ಹಾಗು ಎಂ.ಎಸ್ಸಿ. ಗಣಕ ವಿಜ್ಞಾನ ಅಧ್ಯಯನ ವಿಭಾಗಗಳು ಸ್ನಾತಕೋತ್ತರ ಪಠ್ಯಕ್ರಮಗಳನ್ನು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ. (ಪ್ರತಿ ಲಗತ್ತಿಸಲಾಗಿದೆ).

ಸದರಿ ಅಧ್ಯಯನ ವಿಭಾಗಗಳ ಪಠ್ಯಕ್ರಮಗಳನ್ನು ಶೈಕ್ಷಣಿಕ ಮಂಡಳಿ ಸಭೆಗೆ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ : ಸದರಿ ಶೈಕ್ಷಣಿಕ ಕಾರ್ಯಕ್ರಮಗಳ ಪಠ್ಯಕ್ರಮಗಳನ್ನು ಅನುಮೋದಿಸಲಾಯಿತು.**

## ವಿಷಯ ಸಂಖ್ಯೆ: 17.06

ವಿಷಯ: **CBCS** ಅನ್ನು ಸ್ನಾತಕ ಪದವಿಗೆ ಅಳವಡಿಸಿಕೊಳ್ಳುವ ಸಂಬಂಧ ಅಧ್ಯಾದೇಶ ಸಿದ್ಧಪಡಿಸಿರುವ ಬಗ್ಗೆ.

*******

UGC ODL programme and OL Programme Regulation - 2020 ಹಾಗೂ NAAC ರವರು ದೇಶದ ಎಲ್ಲಾ ಮುಕ್ತ ವಿಶ್ವವಿದ್ಯಾನಿಲಯಗಳಿಗೂ CBCS ಅನ್ನು ಎಲ್ಲಾ ಶಿಕ್ಷಣಕ್ರಮಗಳಿಗೆ ಅಳವಡಿಸಿಕೊಳ್ಳುವ ಬಗ್ಗೆ ನಿರ್ದೇಶನ ನೀಡಿದೆ. ಈ ಸಂಬಂಧ CBCS ಅನ್ನು ಸ್ನಾತಕ ಪದವಿಗಳಿಗೆ (UG) ಅಳವಡಿಸಿಕೊಳ್ಳುವ ಮೊದಲು ಅಧ್ಯಾದೇಶ (Ordinance) ವನ್ನು ಅತಿ ತುರ್ತಾಗಿ ರಚಿಸಬೇಕಾಗಿರುವುದರಿಂದ ಮಾನ್ಯ ಕುಲಪತಿಗಳಿಂದ ರಚಿಸಲ್ಪಟ್ಟ ಅಧ್ಯಾಪಕರುಗಳನ್ನೊಳಗೊಂಡ ಸಮಿತಿಯು ದಿನಾಂಕ: 18.06.2021 ರಂದು ಸಭೆ ಸೇರಿ ಸ್ನಾತಕ ಶಿಕ್ಷಣ ಕ್ರಮದ ಅಧ್ಯಾದೇಶವವನ್ನು ಕೂಲಂಕುಶವಾಗಿ ಚರ್ಚಿಸಿ, ಸಭೆಯ ಸದಸ್ಯರುಗಳ ಅಭಿಪ್ರಾಯದೊಂದಿಗೆ ಸಿದ್ಧಪಡಿಸಲಾಗಿದೆ. (ಪ್ರತಿ ಲಗತ್ತಿಸಲಾಗಿದೆ).

ಈ ಸಂಬಂಧ ಸಿದ್ಧಪಡಿಸಲಾಗಿರುವ ಅಧ್ಯಾದೇಶ ಹಾಗೂ ಸಭಾ ನಡಾವಳಿಯನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಲಾಗಿದೆ.

**ತೀರ್ಮಾನ : CBCS ಅನ್ನು ಸ್ನಾತಕ ಪದವಿಗೆ ಅಳವಡಿಸಿಕೊಳ್ಳುವ ಸಂಬಂಧ ಸಿದ್ಧಪಡಿಸಿರುವ ಅಧ್ಯಾದೇಶವನ್ನು ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯೊಂದಿಗೆ ಸರ್ಕಾರದ ಮುಖಾಂತರ ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಲು ಒಪ್ಪಲಾಯಿತು.**

ಕುಲಸಚಿವರು      ಕುಲಪತಿಗಳು

## ವಿಷಯ ಸಂಖ್ಯೆ: 17.07

**ವಿಷಯ:** ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಪ್ರಾರಂಭಿಸಿರುವ ಅಧ್ಯಯನ ಪೀಠಗಳು ಮತ್ತು ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಅಧ್ಯಯನ ಪೀಠಗಳಿಗೆ ಏಕರೂಪದ ಪರಿನಿಯಮಗಳನ್ನು ಸಿದ್ಧಪಡಿಸಿ ಅನುಮೋದನೆ ಕೋರಿರುವ ಬಗ್ಗೆ.

********

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಅಧ್ಯಯನ ಪೀಠಗಳನ್ನು ಸ್ಥಾಪನೆ ಮಾಡಿದ್ದು, ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಅಧ್ಯಯನ ಪೀಠಗಳಿಗೆ ಪರಿನಿಯಮಗಳನ್ನು ರಚಿಸಲು ಹಾಗೂ ಹಾಲಿ ಇರುವ ಪರಿನಿಯಮಗಳಲ್ಲಿ ಬದಲಾವಣೆಯನ್ನು ತರಲು ಹೊಸ ಪರಿನಿಯಮಗಳನ್ನು ರಚಿಸುವ ಸಂಬಂಧ ಡೀನ್ (ಶೈಕ್ಷಣಿ) ರವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿರುತ್ತದೆ. ಈಗಾಗಲೇ ಸ್ಥಾಪನೆಗೊಂಡಿರುವ ಅಧ್ಯಯನ ಪೀಠಗಳು ಮತ್ತು ಹೊಸ ಅಧ್ಯಯನ ಪೀಠಗಳಿಗೆ ಏಕ ರೂಪದ ಪರಿನಿಯಮಗಳನ್ನು ಸಿದ್ಧಪಡಿಸುವ ಬಗ್ಗೆ ಡೀನ್ (ಶೈಕ್ಷಣಿಕ)ರವರು ಸಭೆಯ ಗಮನಕ್ಕೆ ತಂದು ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ಜೊತೆ ಚರ್ಚಿಸಿರುತ್ತಾ, ಅಗತ್ಯ ಮಾರ್ಪಾಡುಗಳೊಂದಿಗೆ ಪರಿನಿಯಮಗಳ ತಿದ್ದುಪಡಿಗೆ ಎಲ್ಲಾ ಸದಸ್ಯರುಗಳು ಸರ್ವಾನುಮತದಿಂದ ಒಪ್ಪಿರುತ್ತಾರೆ.

ಈ ಸಂಬಂಧ ಪರಿಷ್ಕರಿಸಿರುವ ಪರಿನಿಯಮವನ್ನು ಹಾಗೂ ಸಭಾ ನಡಾವಳಿಯನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಲಾಗಿದೆ.

ತೀರ್ಮಾನ : **ಹೊಸದಾಗಿ ಪ್ರಾರಂಭಿಸಲಾಗುವ ಬಿ.ವಿ. ಕಾರಂತ ಅಧ್ಯಯನ ಪೀಠ, ಡಾ. ರಾಮಮನೋಹರ ಲೋಹಿಯಾ ಅಧ್ಯಯನ ಪೀಠ ಹಾಗು ಕಾಮಧೇನು ಅಧ್ಯಯನ ಪೀಠಗಳ ಪರಿನಿಯಮಗಳನ್ನು ಒಪ್ಪಲಾಯಿತು. ಇವುಗಳಿಗೆ ಕಾರ್ಪಸ್ ಫಂಡ್ ಅನ್ನು ಸರ್ಕಾರದಿಂದ ಪರಿನಿಯಮಗಳು ಒಪ್ಪಿಗೆ ಆದ ನಂತರ ಮೀಸಲಿಡಲು ಒಪ್ಪಲಾಯಿತು. ಈಗಾಗಲೇ ಪ್ರಾರಂಭಿಸಿರುವ ಮಹತ್ಮಾ ಗಾಂಧಿ ಅಧ್ಯಯನ ಪೀಠ, ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅಧ್ಯಯನ ಪೀಠ, ಸ್ವಾಮಿ ವಿವೇಕಾನಂದ ಅಧ್ಯಯನ ಪೀಠ, ಕುವೆಂಪು ಅಧ್ಯಯನ ಮತ್ತು ವಿಸ್ತರಣಾ ಕೇಂದ್ರ, ಡಾ. ಬಾಬು ಜಗಜೀವನ್ ರಾಮ್ ಅಧ್ಯಯನ ಪೀಠ, ಅಕ್ಕಮಹಾದೇವಿ ಅಧ್ಯಯನ ಪೀಠಗಳ ಪರಿನಿಯಮಗಳನ್ನು ತಿದ್ದುಪಡಿ ಮಾಡಿರುವುದನ್ನು ಒಪ್ಪಲಾಯಿತು. ಈ ಎಲ್ಲಾ ಪರಿನಿಯಮಗಳನ್ನು ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯೊಂದಿಗೆ ಸರ್ಕಾರದ ಮುಖಾಂತರ ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಲು ಒಪ್ಪಲಾಯಿತು.**

## ವಿಷಯ ಸಂಖ್ಯೆ: 17.08

**ವಿಷಯ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ NAAC ಮಾನ್ಯತೆ ಪಡೆಯುವ ಬಗ್ಗೆ.**

*******

(1) ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತೆ ಪರಿಷತ್ತು (NAAC) ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ (UGC)ದ ಅಡಿಯಲ್ಲಿ ಸ್ಥಾಪಿತವಾಗಿರುವ ಸ್ವಾಯತ್ತತಾ ಸಂಸ್ಥೆ. NAAC ಉನ್ನತ ಶಿಕ್ಷಣ ಸಂಸ್ಥೆಗಳನ್ನು ಮೌಲ್ಯಮಾಪನ ಮಾಡುತ್ತದೆ ಮತ್ತು ಪ್ರಮಾಣೀಕರಿಸುತ್ತದೆ. ಇದು ಶಿಕ್ಷಣದ ಗುಣಮಟ್ಟ ಬೋಧಕ ವರ್ಗ, ಸಂಶೋಧನೆ, ಮೂಲಸೌಕರ್ಯ ಮುಂತಾದ ಕೆಲವು ಪ್ರಮುಖ ಅಂಶಗಳನ್ನು ಪರಿಶೀಲಿಸುತ್ತದೆ. ಭಾರತದಲ್ಲಿ NAAC ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯಗಳು ಮಾತ್ರ UGC ಅನುದಾನಕ್ಕೆ ಅರ್ಹವಾಗಿರುತ್ತದೆ. UGC ಅನುದಾನ,

ಕುಲಸಚಿವರು		ಕುಲಪತಿಗಳು

ಹಣಕಾಸು ನೆರವು, RUSA ಅನುದಾನ ಇತ್ಯಾದಿಗಳಿಗೆ NAAC ಮಾನ್ಯತೆ ಅಗತ್ಯವಾಗಿರುತ್ತದೆ. ಇದನ್ನು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಭಾರತ ಸರ್ಕಾರವು ಕಡ್ಡಾಯಗೊಳಿಸಿರುತ್ತದೆ ಮತ್ತು NAAC A, A+ ಹಾಗೂ A++ ಹೊಂದಿದ ಸಂಸ್ಥೆಗಳಿಗೆ ವಿದ್ಯಾರ್ಥಿ ಸಮೂಹದಲ್ಲಿ ಹೆಚ್ಚು ಬೇಡಿಕೆ ಇರುತ್ತದೆ. ಇದಲ್ಲದೆ ಸಂಸ್ಥೆಗಳು ತಮ್ಮ ನ್ಯೂನತೆಗಳನ್ನು ಕಂಡುಕೊಳ್ಳಲು ಸಹಕಾರಿಯಾಗುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಶಿಕ್ಷಣ ಸೇವೆಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಒದಗಿಸಲು ಸಹಕಾರಿಯಾಗುತ್ತದೆ.

(2) ಯುವ ವಿದ್ಯಾರ್ಥಿಗಳನ್ನು ಆಕರ್ಷಿಸಲು ಮುಕ್ತ ಮತ್ತು ಹೊರ ಶಿಕ್ಷಣ ಕಾರ್ಯಕ್ರಮಗಳನ್ನು ಹೆಚ್ಚಿಸಲು ಮತ್ತು ಉತ್ತೇಜಿಸಲು UGCಯು ಮುಕ್ತ ವಿಶ್ವವಿದ್ಯಾನಿಲಯಗಳಿಗೆ ಸೂಚಿಸಿರುತ್ತದೆ. ಮುಕ್ತ ವಿಶ್ವವಿದ್ಯಾನಿಲಯಗಳು ನೀಡುವ ಪದವಿಗಳನ್ನು ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳು ನೀಡುವ ಪದವಿಗಳಿಗೆ ಸಮನಾಗಿರುತ್ತದೆಂದು UGCಯು ಘೋಷಿಸಿದ್ದು, ಅದರಿಂದ ಉನ್ನತ ಶಿಕ್ಷಣಸಂಸ್ಥೆಗಳ ಗುಣಮಟ್ಟವನ್ನು ಸಮಾನವಾಗಿ ಮಾಡುವ ಸಲುವಾಗಿ ಮುಕ್ತ ವಿಶ್ವವಿದ್ಯಾನಿಲಯಗಳು NAAC ಮಾನ್ಯತೆ ಪಡೆಯುವ ಕಡ್ಡಾಯ ಮಾನದಂಡವನ್ನು ಅನುಸರಿಸಬೇಕಾಗಿರುತ್ತದೆ.

(3) UGC ODL Programme and OL Programme Regulations - 2020 ಯ ಪ್ರಕಾರವು ಸಹ ಯಾವುದೇ ಉನ್ನತ ಶಿಕ್ಷಣ ಸಂಸ್ಥೆ ಮುಕ್ತ ಮತ್ತು ದೂರ ಶಿಕ್ಷಣ ಕಾರ್ಯಕ್ರಮಗಳನ್ನು ನೀಡಲು ಅರ್ಜಿ ಸಲ್ಲಿಸಲು NAAC ಮಾನ್ಯತೆ ಕಡ್ಡಾಯವಾಗಿರುತ್ತದೆ. 4 Point Scale ನಲ್ಲಿ ಕನಿಷ್ಠ 3.01 ಅಂಕಗಳನ್ನು ಪಡೆಯಬೇಕಾಗಿರುತ್ತದೆ.

(4) UGC - 2020 Regulations ಪ್ರಕಾರ ಮುಕ್ತ ವಿಶ್ವವಿದ್ಯಾನಿಲಯಗಳು ಪ್ರಸ್ತುತ ಜಾರಿಯಲ್ಲಿರುವ UGC ಮಾನ್ಯತೆ ಪೂರ್ಣಗೊಳ್ಳುವ ಮೊದಲು NAAC ಮಾನ್ಯತೆಯನ್ನು ಪಡೆದಿರಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಅವಗಾಹನೆಗೆ ತರುತ್ತಾ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಯುಜಿಸಿ ನೀಡಿರುವ ಮಾನ್ಯತೆಯು (2022-23)ಕ್ಕೆ ಅಂತ್ಯವಾಗಲಿದ್ದು, ಅಷ್ಟರೊಳಗೆ ನ್ಯಾಕ್ ಮಾನ್ಯತೆಯನ್ನು ಪಡೆದು ನವೀಕರಣಕ್ಕಾಗಿ ಯುಜಿಸಿಗೆ ಅರ್ಜಿಯನ್ನು ಸಲ್ಲಿಸಬೇಕಾಗಿರುವುದರಿಂದ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**<u>ಚರ್ಚೆ</u> : ಕರಾಮುವಿಯು NAAC ಮಾನ್ಯತೆ ಪಡೆಯುವುದು ಬಹಳ ಮುಖ್ಯ ಎಂಬುದನ್ನು ಗಮನಿಸಲಾಯಿತು. ಇದಕ್ಕಾಗಿ CIQA ಅಡಿಯಲ್ಲಿ ಪ್ರತ್ಯೇಕ NAAC CELL ನ್ನು ಸ್ಥಾಪಿಸಿ, ಒಬ್ಬರು ಸಂಯೋಜನಾಧಿಕಾರಿಯನ್ನು, ನೇಮಿಸಿ, ಒಬ್ಬ ಸಹಾಯಕ ಕುಲಸಚಿವರು, ಒಬ್ಬ ಅಧೀಕ್ಷಕರು, ಇಬ್ಬರು ಕಾರ್ಯನಿರ್ವಾಹಕರು ಹಾಗು ಇಬ್ಬರು ಸೇವಕರನ್ನು ಈ ವಿಭಾಗಕ್ಕೆ ವರ್ಗಾಯಿಸಲು ತೀರ್ಮಾನಿಸಲಾಯಿತು.**

**<u>ತೀರ್ಮಾನ</u> : ಸದರಿ NAAC ಮಾನ್ಯತೆ ಪಡೆಯುವ ಪ್ರಯತ್ನವನ್ನು ಆದ್ಯತೆ ಮೇರೆಗೆ ಕೈಗೊಳ್ಳಲು ತೀರ್ಮಾನಿಸಲಾಯಿತು.**

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 17.09

**ವಿಷಯ: 2019-20ನೇ ಸಾಲಿನ CIQA Annual Report ಅನ್ನು UGC-DEB, New Delhi ಇವರಿಗೆ ಸಲ್ಲಿಸಿರುವ ಬಗ್ಗೆ ಅನುಸಮರ್ಥನೆ ಕೋರಿ.**

********

ವಿಶ್ವವಿದ್ಯಾನಿಲಯದ 2019-20ನೇ ಸಾಲಿನ CIQA Annual Report ಅನ್ನು Joint Secretary UGC-DEB, New Delhi ಇವರಿಗೆ Hard Copy ಮತ್ತು Soft Copyಗಳನ್ನು ನಿಗದಿತ ಸಮಯದೊಳಗೆ ಸಲ್ಲಿಸುವಂತೆ ತಮ್ಮ e-mail ಮುಖಾಂತರ ದಿನಾಂಕ: 08.03.2021 ರಂದು ಸೂಚಿಸಿರುತ್ತಾರೆ. ಅದರಂತೆ ವಿವಿಧ ವಿಭಾಗಗಳಿಂದ ಮಾಹಿತಿಗಳನ್ನು ಕ್ರೋಢಿಕರಿಸಿ CIQA Annual Report ಅನ್ನು ಸಿದ್ಧಪಡಿಸಿ, ನಿಗದಿತ ಸಮಯದೊಳಗೆ Soft Copy ಅನ್ನು UGC-DEB Portalಗೆ Upload ಮಾಡಲಾಗಿರುತ್ತದೆ (ಪ್ರತಿ ಲಗತ್ತಿದೆ).

ಮುಂದುವರೆದು, CIQA Annual Report Hard Copy ಅನ್ನು Joint Secretary UGC-DEB, New Delhi ಇವರಿಗೆ ದಿನಾಂಕ: 01.04.2021 ರಂದು Speed Post ಮೂಲಕ ರವಾನಿಸಲಾಗಿರುತ್ತದೆಂಬ ಅಂಶಗಳನ್ನು ಅವಗಾಹನೆಗೆ ತರುತ್ತಾ, ಈ ಸಂಬಂಧ ಈಗಾಗಲೇ ಕೈಗೊಂಡಿರುವ ಪ್ರಕ್ರಿಯೆಗೆ ಅನುಸಮರ್ಥನೆ ಕೋರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಸಭೆಗೆ ಅವಗಾಹನೆಗೆ ತರಲಾಗಿದೆ.

<u>ತೀರ್ಮಾನ</u> : **2019-20ನೇ ಸಾಲಿನ CIQA Annual Report ಅನ್ನು UGC-DEB, New Delhi ಇವರಿಗೆ ಸಲ್ಲಿಸಿರುವ ಬಗ್ಗೆ ಅನುಸಮರ್ಥನೆ ನೀಡಲಾಯಿತು.**

## ವಿಷಯ ಸಂಖ್ಯೆ: 17.10

**ವಿಷಯ** : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ STATUTE GOVERNING TO ESTABLISHMENT OF SCHOOL IN KARNATAKA STATE OPEN UNIVERSITYಗೆ ಸಂಬಂಧಪಟ್ಟ ಪರಿನಿಯಮವನ್ನು ಅನುಮೋದಿಸುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಿವಿಧ ನಿಕಾಯಗಳಿಗೆ ಸಂಬಂಧಿಸಿದಂತೆ UGC Regulations ಗಳನ್ವಯ SCHOOL ಪ್ರಾರಂಭಿಸಲು ಕ್ರಮವಹಿಸಲು STATUTE GOVERNING TO ESTABLISHMENT OF SCHOOL IN KARNATAKA STATE OPEN UNIVERSITY ಕರಡು ಪರಿನಿಯಮವನ್ನು ರಚಿಸಿ 41 ನೇ ಶೈಕ್ಷಣಿಕ ಮಂಡಳಿ ಮತ್ತು 147.19 ವ್ಯವಸ್ಥಾಪನಾ ಮಂಡಳಿ ಅನುಮೋದನೆ ಪಡೆದು ದಿನಾಂಕ: 29-07-2017 ರಂದು ಸರ್ಕಾರದ ಮುಖಾಂತರ ಘನತೆವೆತ್ತ ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸಲ್ಲಿಸಲಾಗಿತ್ತು. ಆದರೆ ಮಾನ್ಯ ರಾಜ್ಯಪಾಲರ ಸಹಿಗಾಗಿ ಪ್ರತಿ ಪುಟದಲ್ಲೂ ಸ್ಥಳಾವಕಾಶ ನೀಡುವಂತೆ ನಿರ್ದೇಶಿಸಿ ಸರ್ಕಾರದಿಂದ ದಿನಾಂಕ: 08-11-2019 ರಂದು ಸಲ್ಲಿಕೆಯಾಗಿದ್ದ ಪರಿನಿಯಮವು ಅನುಮೋದನೆಗೊಳ್ಳದೆ ವಿಶ್ವವಿದ್ಯಾನಿಲಯಕ್ಕೆ ವಾಪಸ್ಸು ಬಂದಿದೆ.

ಪ್ರಸ್ತುತ. UGC (ODL & OL) Regulation - 2020 ಅನ್ವಯವಾಗುವಂತೆ ಸದರಿ ಪರಿನಿಯಮವನ್ನು ಬದಲಾವಣೆ ಮಾಡುವ ಸಂಬಂಧವಾಗಿ ಮಾನ್ಯ ಕುಲಪತಿಗಳಿಂದ 28-10-2020 ರಂದು ಅನುಮೋದನೆ ಪಡೆದು ಸಮಿತಿಯನ್ನು ರಚಿಸಿ, ಸದರಿ ಸಮಿತಿಯು ಈ ಹಿಂದಿನ ಪರಿನಿಯಮ ಮತ್ತು UGC (ODL & OL) Regulation – 2020 ರ ಅಂಶಗಳಿಗನುಗುಣವಾಗಿ ಪರಿಶೀಲಿಸಿ ಪರಿನಿಯಮವನ್ನು ಸಿದ್ದಪಡಿಸಿ ದಿನಾಂಕ: 22-06-2021 ರಂದು ಸಭೆ ನಡೆಸಿ ರಚಿತವಾಗಿರುವ ಕರಡು STATUTE GOVERNING TO ESTABLISHMENT OF SCHOOL IN KARNATAKA STATE OPEN UNIVERSITY ಪರಿನಿಯಮವನ್ನು ಡೀನ್ (ಶೈಕ್ಷಣಿಕ) ವಿಭಾಗಕ್ಕೆ ಸಲ್ಲಿಸಿರುತ್ತಾರೆ.

ಕುಲಸಚಿವರು　　　　　　　　　　ಕುಲಪತಿಗಳು

ಸದರಿ ಕರಡು ಪರಿನಿಯಮಕ್ಕೆ ವಿವಿಯ ಶಾಸನಬದ್ಧ ಪ್ರಾಧಿಕಾರಗಳ ಅನುಮೋದನೆ ಪಡೆದ ನಂತರ ವಿವಿಯ ಅಧಿನಿಯಮ 1992 ಪ್ರಕರಣ 23(3) ರ ಪ್ರಕಾರ ಸರ್ಕಾರದ ಮುಖಾಂತರ ಘನತೆವೆತ್ತ ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸಲ್ಲಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಿದ್ಧಪಡಿಸಿರುವ ಕರಡು ಪರಿನಿಯಮವನ್ನು 17 ನೇ ವಿಶೇಷ ಶೈಕ್ಷಣಿಕ ಮಂಡಳಿಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ : **41 ನೇ ಶೈಕ್ಷಣಿಕ ಮಂಡಳಿ ಮತ್ತು 147.19 ವ್ಯವಸ್ಥಾಪನಾ ಮಂಡಳಿ ಅನುಮೋದನೆ ಪಡೆದ STATUTE GOVERNING TO ESTABLISHMENT OF SCHOOL IN KARNATAKA STATE OPEN UNIVERSITY ಪರಿನಿಯಮದಲ್ಲಿ UGC (ODL & OL) Regulation - 2020 ಅನ್ವಯವಾಗುವಂತೆ ಮಾಡಿರುವ ತಿದ್ದುಪಡಿಗಳನ್ನು ಒಪ್ಪಲಾಯಿತು. ಸದರಿ ಪರಿನಿಯಮಗಳನ್ನು ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯೊಂದಿಗೆ ಸರ್ಕಾರದ ಮುಖಾಂತರ ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಲು ಒಪ್ಪಲಾಯಿತು.**

## ವಿಷಯ ಸಂಖ್ಯೆ: 17.11

**ವಿಷಯ: ಕರಾಮುವಿಯ ಅಧ್ಯಯನ ವಿಭಾಗಗಳ ಹೆಸರನ್ನು ತಿದ್ದುಪಡಿ ಮಾಡುವ ಬಗ್ಗೆ.**

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹಲವು ಅಧ್ಯಯನ ವಿಭಾಗಗಳಲ್ಲಿ ಸ್ನಾತಕ ಪದವಿಗಳನ್ನು ಮಾತ್ರ ನಡೆಸುತ್ತಿದ್ದು, ಸದರಿ ವಿಭಾಗಗಳಿಗೆ ಅಧ್ಯಯನ ವಿಭಾಗಗಳಾಗಿ ಗುರುತಿಸಲಾಗಿದ್ದು, ಅದರಂತೆ ಸ್ನಾತಕೋತ್ತರ ಕೋರ್ಸುಗಳನ್ನು ಮಾತ್ರ ನಡೆಸುತ್ತಿರುವ ವಿಭಾಗಗಳಿಗೆ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳೆಂದು ನಾಮಕರಣ ಮಾಡಬೇಕಾಗಿರುತ್ತದೆ. ಅದರಂತೆ ಕೆಲವು ಅಧ್ಯಯನ ವಿಭಾಗಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ನಡೆಸುತ್ತಿದ್ದು, ಸದರಿ ವಿಭಾಗಗಳಿಗೆ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳೆಂದು ನಾಮಕರಣ ಮಾಡಬೇಕಾಗಿರುತ್ತದೆ.

ದಿನಾಂಕ: 27–02–2019ರ 5ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆದು, ಆನಂತರ ದಿನಾಂಕ: 05–03–2019ರ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದ ನಂತರ ದಿನಾಂಕ: 08–03–2019ರಂದು ಮಾನ್ಯ ಕುಲಪತಿಗಳಿಂದ ಅನುಮೋದನೆ ಪಡೆದು ಕೆಲವು ವಿಭಾಗಗಳ ಹೆಸರನ್ನು ಅಧ್ಯಯನ ಮತ್ತು ಸಂಶೋಧನಾ ವಿಭಾಗಳೆಂದು ಅಧಿಸೂಚನೆ ಹೊರಡಿಸಲಾಗಿದೆ. ಪ್ರತಿ ಲಗತ್ತಿಸಲಾಗಿದೆ. (ಭಾವುಟ–ಅ)

ತದನಂತರ, ಭೂಗೋಳಶಾಸ್ತ್ರ ಮತ್ತು ಮಾಹಿತಿ ತಂತ್ರಜ್ಞಾನ ಅಧ್ಯಯನ ವಿಭಾಗಗಳ ಹೆಸರನ್ನು ಸಂಶೋಧನಾ ವಿಭಾಗಗಳಾಗಿ ದಿನಾಂಕ: 16–12–2020ರ 16ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆ ಹಾಗು ದಿನಾಂಕ: 02–01–2021ರ 163ನೇ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ಪಡೆದ ನಂತರ ದಿನಾಂಕ: 09–02–2021ರಂದು ಮಾನ್ಯ ಕುಲಪತಿಗಳಿಂದ ಅನುಮೋದನೆ ಪಡೆದು ಅಧಿಸೂಚನೆ ಹೊರಡಿಸಲಾಗಿದೆ ಪ್ರತಿ ಲಗತ್ತಿಸಲಾಗಿದೆ. (ಭಾವುಟ–ಆ)

ಕುಲಸಚಿವರು | ಕುಲಪತಿಗಳು

ಕರಾಮುವಿಯಲ್ಲಿ ಈ ಕೆಳಕಂಡ ವಿಷಯಗಳಿಗೆ ಸ್ನಾತಕ ಕೋರ್ಸುಗಳ ಇಲ್ಲದ ಕಾರಣ ಮರು ನಾಮಕರಣ ಮಾಡಲು ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆ ಕೋರಲಾಗಿದೆ.

| ಕ್ರಮ ಸಂಖ್ಯೆ | ಕರಾಮುವಿಯಲ್ಲಿ ಈಗ ಇರತಕ್ಕ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು | ಮರುನಾಮಕರಣ ಮಾಡಬೇಕಾಗಿರುವ ವಿಭಾಗಗಳು |
|---|---|---|
| 1 | ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋದನಾ ವಿಭಾಗ | ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋದನಾ ವಿಭಾಗ |
| 2 | ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸೂಕ್ಷ್ಮ ಜೀವವಿಜ್ಞಾನ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 3 | ಜೈವಿಕ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಜೈವಿಕ ತಂತ್ರಜ್ಞಾನ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 4 | ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ರಸಾಯನಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 5 | ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಜೀವರಸಾಯನಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 6 | ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಆಹಾರ ವಿಜ್ಞಾನ ಮತ್ತು ಪೋಷಣೆ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 7 | ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ನಿರ್ವಹಣಾಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 8 | ಗ್ರಂಥಾಲಯ ಮತ್ತು ಮಾಹಿತಿ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಗ್ರಂಥಾಲಯ ಮತ್ತು ಮಾಹಿತಿ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| 9 | ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ |
| 10 | ಮಾಹಿತಿ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಮಾಹಿತಿ ತಂತ್ರಜ್ಞಾನ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |

ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚೆ ಹಾಗು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

<u>ಚರ್ಚೆ</u> : ಮೇಲ್ಕಂಡ ಕೆಲವು ವಿಭಾಗಗಳು ಸ್ನಾತಕ ಕಾರ್ಯಕ್ರಮಗಳಾದ ಡಿಪ್ಲೊಮಾ, ಸರ್ಟಿಫಿಕೇಟ್ ಕಾರ್ಯಕ್ರಮಗಳನ್ನು ನಡೆಸುತ್ತಿರುವುದನ್ನು ಗಮನಿಸಲಾಯಿತು. ಇನ್ನೂ ಕೆಲವು ವಿಭಾಗಗಳು ಬಿ.ಎಸ್ಸಿ, ಬಿ.ಬಿ.ಎ ಆರಂಭಿಸಲು ಯುಜಿಸಿಗೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಿದ್ದು ಮುಂಬರುವ ಶೈಕ್ಷಣಿಕ ಸಾಲಿನಿಂದ ಆರಂಭಿಸಲು ಉದ್ದೇಶಿಸಿರುವುದನ್ನು ಗಮನಿಸಲಾಯಿತು. ವಿಭಾಗಗಳ ಹೆಸರುಗಳನ್ನು ಪದೇ ಪದೇ ಬದಲಾಯಿಸುವ ಬದಲು ಈಗಾಗಲೇ ಸಿದ್ಧಪಡಿಸಿರುವ ಸ್ಕೂಲ್‌ಗೆ ಸಂಬಂಧಿಸಿದ ಕರಡು ಪರಿನಿಯಮಗಳಲ್ಲಿ ಸೂಚಿಸಿರುವ ಹೆಸರನ್ನು ಹಾಗೇ ಉಳಿಸಿಕೊಳ್ಳಲು ತೀರ್ಮಾನಿಸಲಾಯಿತು.

<u>ತೀರ್ಮಾನ</u> : ಮೇಲಿನ ಪಟ್ಟಿಯಲ್ಲಿ ಸೂಚಿಸಿರುವ ಇರತಕ್ಕ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು ಹೆಸರುಗಳನ್ನೇ ಉಳಿಸಿಕೊಳ್ಳಲು ತೀರ್ಮಾನಿಸಲಾಯಿತು.

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ: 17.12**

**ವಿಷಯ: ಕರಾಮುವಿಯ 2021–22ನೇ ಶೈಕ್ಷಣಿಕ ಸಾಲಿನಲ್ಲಿ ಪಿಹೆಚ್.ಡಿ ಕಾರ್ಯಕ್ರಮಗಳಿಗೆ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿ ಖಾಲಿ ಇರುವ ಸೀಟುಗಳಿಗೆ ಪ್ರವೇಶಾತಿಯನ್ನು ನಿಯಮಾನುಸಾರ ಜಾಹೀರಾತು ನೀಡಿ ಪ್ರವೇಶಾತಿ ಪ್ರಕ್ರಿಯೆಯನ್ನು ಮಾಡುವ ಬಗ್ಗೆ.**

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2021–22ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗವಾರು ಖಾಲಿ ಇರುವ ಪಿಹೆಚ್.ಡಿ ಸೀಟ್‌ಗಳಗೆ ಕರಾಮುವಿ ಪಿಹೆಚ್.ಡಿ ಆಧ್ಯಾದೇಶ 2012 (2ನೇ ತಿದ್ದುಪಡಿ ಆಧ್ಯಾದೇಶ 2019)ರ ಅಡಿಯಲ್ಲಿ ನಿಯಮಾನುಸಾರ ಜಾಹೀರಾತು ನೀಡಿ, ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ ಅರ್ಹ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡುವ ಪ್ರಕ್ರಿಯೆಯನ್ನು ಪ್ರಾರಂಭಿಸಲು ಅನುಮೋದನೆ ಕೋರಲಾಗಿದೆ.

ಕರಾಮುವಿಯಲ್ಲಿ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿ ಖಾಲಿ ಇರುವ ಪಿಹೆಚ್.ಡಿ ಸೀಟ್‌ಗಳ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ಕರಾಮುವಿಯ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಪಿಹೆಚ್.ಡಿ ಮಾರ್ಗದರ್ಶಕರುಗಳಿಂದ ಖಾಲಿ ಇರುವ ಸೀಟುಗಳು |
|---|---|---|
| 1 | ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 06 |
| 2 | ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 07 |
| 3 | ಸೂಕ್ಷ್ಮ ಜೀವವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 01 |
| 4 | ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 03 |
| 5 | ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 02 |
| 6 | ಭೂಗೋಳಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 04 |
| 7 | ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 07 |
| 8 | ಹಿಂದಿ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 01 (ವಿಕಲಚೇತನರು) |
| 9 | ಮಾಹಿತಿ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 04 |
| | | **ಒಟ್ಟು – 35** |

ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚೆ ಹಾಗು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

**ತೀರ್ಮಾನ : ಕರಾಮುವಿಯ 2021–22ನೇ ಶೈಕ್ಷಣಿಕ ಸಾಲಿನಲ್ಲಿ ಪಿಹೆಚ್.ಡಿ ಕಾರ್ಯಕ್ರಮಗಳಿಗೆ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿ ಖಾಲಿ ಇರುವ ಸೀಟುಗಳಿಗೆ ಪ್ರವೇಶಾತಿಯನ್ನು ನಿಯಮಾನುಸಾರ ಜಾಹೀರಾತು ನೀಡಿ ಪ್ರವೇಶಾತಿ ಪ್ರಕ್ರಿಯೆಯನ್ನು ಆರಂಭಿಸಲು ಒಪ್ಪಲಾಯಿತು. ಪಿಹೆಚ್.ಡಿ ವಿವರಣಾ ಪುಸ್ತಕವನ್ನು ಅನುಮೋದಿಸಲಾಯಿತು.**

ಕುಲಸಚಿವರು ಕುಲಪತಿಗಳು

## ವಿಷಯ ಸಂಖ್ಯೆ: 17.13

ವಿಷಯ: ಕರಾಮುವಿಯ 2018–19ನೇ ಶೈಕ್ಷಣಿಕ ಸಾಲಿನಲ್ಲಿ ಪಿಹೆಚ್.ಡಿ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಕೋರ್ಸ್‌ವರ್ಕ್‌ಗಳನ್ನು ನಡೆಸುತ್ತಿದ್ದು, ಕರಾಮುವಿ ಪಿಹೆಚ್.ಡಿ ಆಧ್ಯಾದೇಶ 2012 (2ನೇ ತಿದ್ದುಪಡಿ ಅಧ್ಯಾದೇಶ 2019)ರ ಅನ್ವಯ ಪಿಹೆಚ್.ಡಿ ಕೋರ್ಸ್‌ವರ್ಕ್‌ಅನ್ನು Face to Face (Offline) ಮಾಡಲು ಸೂಚಿಸಿದ್ದು, ಕೋವಿಡ್–19ರ ಹಿನ್ನಲೆಯಲ್ಲಿ ಪಿಹೆಚ್.ಡಿ ಕೋರ್ಸ್‌ವರ್ಕ್ ಅನ್ನು Online ಮುಖಾಂತರ ನಡೆಸಲು ಅನುಮೋದಿಸುವ/ ಅನುಸಮರ್ಥಿಸುವ ಬಗ್ಗೆ.

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2018–19ನೇ ಶೈಕ್ಷಣಿಕ ಸಾಲಿನಲ್ಲಿ ಪಿಹೆಚ್.ಡಿ ಪ್ರವೇಶಾತಿ ಪಡೆದು ತಾತ್ಕಾಲಿಕ ನೊಂದಣಿ ಪಡೆದಿರುವ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗವಾರು ಸಂಶೋಧನಾ ವಿದ್ಯಾರ್ಥಿಗಳಿಗೆ ಪಿಹೆಚ್.ಡಿ ಕೋರ್ಸ್‌ವರ್ಕ್‌ಅನ್ನು ನಡೆಸುತ್ತಿದ್ದು, ಕರಾಮುವಿ ಪಿಹೆಚ್.ಡಿ ಆಧ್ಯಾದೇಶ 2012(2ನೇ ತಿದ್ದುಪಡಿ ಅಧ್ಯಾದೇಶ 2019)ರ ಅನ್ವಯ ಪಿಹೆಚ್.ಡಿ ಕೋರ್ಸ್‌ವರ್ಕ್‌ಅನ್ನು Face to Face (Offline) ಮಾಡಲು ಸೂಚಿಸಿದ್ದು, ಇತ್ತೀಚಿನ ದಿನಗಳಲ್ಲಿ ರಾಷ್ಟ್ರಾದ್ಯಂತ ಕೋವಿಡ್–19 ಮಹಾಮಾರಿಯಿಂದ ಸರ್ಕಾರದ ಮಾರ್ಗಸೂಚಿಗಳನ್ವಯ ಯಾವುದೇ ಶೈಕ್ಷಣಿಕ ಚಟುವಟಿಕೆಗಳು ನಿಗಧಿತ ಸಮಯದಲ್ಲಿ ನಡೆಯದೇ ಇರುವುದನ್ನು ಮನಗಂಡು, ವಿಶ್ವವಿದ್ಯಾನಿಲಯದ ಎಲ್ಲಾ ಸಂಪರ್ಕ ಕಾರ್ಯಕ್ರಮಗಳನ್ನು Online ಮುಖಾಂತರ ಮಾಡಲಾಗಿದೆ/ಮಾಡಲಾಗುತ್ತಿದೆ. ಪಿಹೆಚ್.ಡಿ ಕೋರ್ಸ್‌ಗಳಿಗೆ ಹೊರ ಸ್ಥಳದಿಂದ ವಿದ್ಯಾರ್ಥಿಗಳು ಕೇಂದ್ರ ಸ್ಥಾನಕ್ಕೆ ಆಗಮಿಸಿ ಪಿಹೆಚ್.ಡಿ ಕೋರ್ಸ್‌ವರ್ಕ್‌ಗೆ Face to Face ಹಾಜರಾಗಲು ಸಾಧ್ಯವಾಗದ ಕಾರಣ ವಿಶ್ವವಿದ್ಯಾನಿಲಯದ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸ್ನಾತಕೋತ್ತರ ಅಧ್ಯಯನ ಮಂಡಳಿಯ ಅಧ್ಯಕ್ಷರು/ಮುಖ್ಯಸ್ಥರ ಮುಖಾಂತರ ಪಿಹೆಚ್.ಡಿ ಕೋರ್ಸ್‌ವರ್ಕ್‌ಗೆ ಸಂಬಂಧಪಟ್ಟಂತೆ Onlineನಲ್ಲಿ ನಡೆಸಲು ವಿಭಾಗದ ಕಡತದಲ್ಲಿ ಅನುಮತಿ ಕೋರಿದ್ದು, ಸದರಿ ಅನುಮತಿಯನ್ನು ಮಾನ್ಯ ಕುಲಪತಿಗಳು/ಕುಲಸಚಿವರ ಅನುಮೋದನೆ ಪಡೆದು Onlineನಲ್ಲಿ ಪಿಹೆಚ್.ಡಿ ಕೋರ್ಸ್‌ವರ್ಕ್‌ಗಳನ್ನು ನಡೆಸಲು ಈಗಾಗಲೇ ಕ್ರಮವಹಿಸಲಾಗಿದೆ.

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಪಿಹೆಚ್.ಡಿ ಕೋರ್ಸ್‌ವರ್ಕ್‌ಗಳನ್ನು Online ಮುಖಾಂತರ ನಡೆಸಲು ಅನುಮೋದನೆ ನೀಡಿದ್ದು, ಇನ್ನೂ ಕೆಲವು ಅಧ್ಯಯನ ವಿಭಾಗಗಳಿಂದ (ಕೋವಿಡ್–19ರ ಹಿನ್ನಲೆಯಲ್ಲಿ) ಪಿಹೆಚ್.ಡಿ ಕೋರ್ಸ್‌ವರ್ಕ್‌ಗಳನ್ನು Online ಮುಖಾಂತರ ನಡೆಸಿ ಘಟನೋತ್ತರ ಅನುಮೋದನೆ ಕೋರಿ ಕಡತಗಳು ಬರುತ್ತಿದ್ದು, ಈ ಸಂಬಂಧ ಘಟನೋತ್ತರ ಅನುಮೋದನೆ ಕೋರಿ ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಲಾಗಿದೆ.

ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚೆ ಹಾಗು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

<u>ತೀರ್ಮಾನ</u> : **ಕೋವಿಡ್–19ರ ಹಿನ್ನಲೆಯಲ್ಲಿ ಒಂದು ಬಾರಿ ಪಿಹೆಚ್.ಡಿ ಕೋರ್ಸ್‌ವರ್ಕ್ ತರಗತಿಗಳನ್ನು Online ಮುಖಾಂತರ ಜುಲೈ–ಆಗಸ್ಟ್‌ವರೆಗೆ ನಡೆಸಲು ಅವಕಾಶ ನೀಡಲು ಅನುಮೋದನೆ ನೀಡಲಾಯಿತು. ಕೋರ್ಸ್‌ವರ್ಕ್ ತರಗತಿಗಳನ್ನು Blended Mode ನಲ್ಲಿ ನಡೆಸುವುದು ಸೂಕ್ತ ಎಂದು ಅಭಿಪ್ರಾಯಪಡಲಾಯಿತು. ಈಗಾಗಲೇ Online ಮುಖಾಂತರ ನಡೆಸುತ್ತಿರುವ ಪಿಹೆಚ್.ಡಿ ಕೋರ್ಸ್‌ವರ್ಕ್ ತರಗತಿಗಳಿಗೆ ಅನುಸಮರ್ಥನೆ ನೀಡಲಾಯಿತು.**

ಕುಲಸಚಿವರು　　　　　　　　　　　　　　ಕುಲಪತಿಗಳು

## ವಿಷಯ ಸಂಖ್ಯೆ: 17.14

ವಿಷಯ: Statute II, Determining the Constitution, Powers and Function of Board of Studies ನ ಪರಿನಿಯಮವನ್ನು ತಿದ್ದುಪಡಿಗೊಳಿಸಿರುವ ಬಗೆಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ವಿಭಾಗಗಳಿಗೆ ಸಂಬಂಧಿಸಿದಂತೆ, ವಿವಿಯ ಅಧಿನಿಯಮ 1992 ಪ್ರಕರಣ 23(3) ರ ಪ್ರಕಾರ ಪರಿನಿಯಮದ ಸಂಖ್ಯೆ: II Statutes Determining the Constitution, Powers and Function of Board of Studies ಅನ್ನು ರಚಿಸಿ 56ನೇ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಸದರಿ ಪರಿನಿಯಮಕ್ಕೆ ದಿನಾಂಕ: 22-07-2002 ರಂದು ಘನತೆವೆತ್ತ ಕುಲಾಧಿಪತಿಗಳು ಅಂಕಿತಮಾಡಿರುತ್ತಾರೆ. ಈ ಸಂಬಂಧ ಈ ಪರಿನಿಯಮ ಅನುಷ್ಠಾನಗೊಳ್ಳಲು ಸಂಖ್ಯೆ: ಕರಾಮುವಿ/ಯುಎ-1/16/2002-03 ದಿನಾಂಕ: 22-08-2002 ರ ಪ್ರಕಾರ ಅಧಿಸೂಚನೆ ಹೊರಡಿಸಲಾಗಿತ್ತು.

ಪ್ರಸ್ತುತ, ಯುಜಿಸಿ ನಿಯಮಾವಳಿಗಳನ್ವಯ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು ನಡೆಸುತ್ತಿರುವ ಎಲ್ಲಾ ಶಿಕ್ಷಣಕ್ರಮಗಳಿಗೆ ಅನ್ವಯವಾಗುವಂತೆ ಏಕರೂಪದ ಅಧ್ಯಯನ ಮಂಡಳಿಗಳ ರೂಪುರೇಷೆಗಳನ್ನು ಅಳವಡಿಸಿಕೊಳ್ಳಬೇಕಾದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ದಿನಾಂಕ: 22-03-2021 ರ ಅನುಮೋದನೆ ಮೇರೆಗೆ, ಸಮಿತಿಯನ್ನು ಕಚೇರಿ ಆದೇಶದ ಸಂಖ್ಯೆ: ಕರಾಮುವಿ/ ಡೀನ್(ಶೈ)-07/2020-21, ದಿನಾಂಕ: 29-03-2021 ರ ಪ್ರಕಾರ ರಚಿಸಲಾಗಿತ್ತು.

ಸದರಿ ಸಮಿತಿಯು, ಈ ಹಿಂದೆ ಚಾಲ್ತಿಯಲ್ಲಿದ್ದ Statute II, Determining the Constitution, Powers and Function of Board of Studies ನ ಪರಿನಿಯಮ ಮತ್ತು ಪ್ರಸ್ತುತದ ಯುಜಿಸಿ ನಿಯಮಾವಳಿಗಳನ್ವಯ ಕೂಲಂಕುಶವಾಗಿ ಪರಿಶೀಲಿಸಿ Statute II, Determining the Constitution, Powers and Function of Board of Studies ನ (1st Amendment 2021) ಅನ್ನು ಸಿದ್ಧಪಡಿಸಿ ಸದರಿ ಸಮಿತಿಯು ದಿನಾಂಕ: 21-06-2021 ರಂದು ಸಭೆ ಸೇರಿ, ಚರ್ಚಿಸಿ ನಿರ್ಣಯಕ್ಕೆಗೊಂಡು ಅಂತಿಮವಾಗಿ ತಿದ್ದುಪಡಿ ಪರಿನಿಯಮವನ್ನು ಡೀನ್(ಶೈ) ವಿಭಾಗಕ್ಕೆ ಸಲ್ಲಿಸಿರುತ್ತಾರೆ.

ಸದರಿ ಕರಡು ಪರಿನಿಯಮಕ್ಕೆ ವಿವಿಯ ಶಾಸನಬದ್ಧ ಪ್ರಾಧಿಕಾರಗಳ ಅನುಮೋದನೆ ಪಡೆದ ನಂತರ ವಿವಿಯ ಅಧಿನಿಯಮ 1992 ಪ್ರಕರಣ 23(3) ರ ಪ್ರಕಾರ ಸರ್ಕಾರದ ಮುಖಾಂತರ ಘನತೆವೆತ್ತ ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸಲ್ಲಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಿದ್ಧಪಡಿಸಿರುವ ಕರಡು ಪರಿನಿಯಮವನ್ನು 17 ನೇ ವಿಶೇಷ ಶೈಕ್ಷಣಿಕ ಮಂಡಳಿಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**<u>ತೀರ್ಮಾನ</u> : ಸದರಿ ಪರಿನಿಯಮಕ್ಕೆ ಮಾಡಿರುವ ಕರಡು ತಿದ್ದುಪಡಿಗಳನ್ನು ಒಪ್ಪಲಾಯಿತು. ಸದರಿ ಪರಿನಿಯಮಗಳನ್ನು ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯೊಂದಿಗೆ ಸರ್ಕಾರದ ಮುಖಾಂತರ ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಲು ಒಪ್ಪಲಾಯಿತು.**

**ಕುಲಸಚಿವರು** | **ಕುಲಪತಿಗಳು**

## ವಿಷಯ ಸಂಖ್ಯೆ: 17.15

**ವಿಷಯ** : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಹಾಗು ಪರೀಕ್ಷಾ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ, ವಿವಿಧ ಭತ್ಯೆಗಳನ್ನು ನಿಗದಿಪಡಿಸುವ ಸಂಬಂಧ ಪರಿನಿಯಮಗಳನ್ನು ಸಿದ್ಧಪಡಿಸಿರುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಹಾಗು ಪರೀಕ್ಷಾ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ, ಇದುವರೆವಿಗೂ ವಿ.ವಿ.ಯ ಅನೇಕ ಕೇಂದ್ರಗಳಲ್ಲಿ ಸಂಪರ್ಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಇದರಲ್ಲಿ ಭಾಗವಹಿಸುವ ಬೋಧಕ/ ಬೋಧಕೇತರ ಸಿಬ್ಬಂದಿಗಳಿಗೆ ನೀಡುತ್ತಿದ್ದ ವಿವಿಧ ಭತ್ಯೆಗಳು ಆಡಿಟ್ ಆಕ್ಷೇಪಣೆಯಾಗಿರುವ ಹಿನ್ನೆಲೆಯಲ್ಲಿ, ಮಾನ್ಯ ಕುಲಪತಿಗಳು ದಿನಾಂಕ: 05–03–2021 ರಂದು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಸಮಿತಿಯನ್ನು ರಚಿಸಿರುತ್ತಾರೆ. ಈ ವಿಷಯವಾಗಿ ಸಮಿತಿಯು ದಿನಾಂಕ: 18–06–2021 ರಂದು ಸಭೆ ಸೇರಿ, ಸಮಿತಿಯ ಸದಸ್ಯರುಗಳ ಒಮ್ಮತದಿಂದ ಶೈಕ್ಷಣಿಕ ಕಾರ್ಯಗಳನ್ನು ಕುರಿತಾದ ಬಗ್ಗೆ "Statute Governing Conduct of Delivery of Academic and Skill Development Programmes" ಎಂಬ ಶೀರ್ಷಿಕೆಯಲ್ಲಿ ಹಾಗು ಪರೀಕ್ಷಾ ಕಾರ್ಯಗಳನ್ನು ಕುರಿತಾದ ಬಗ್ಗೆ "Statute Governing Conduct of Examination" ಎಂಬ ಶೀರ್ಷಿಕೆಯಲ್ಲಿ ಪರಿನಿಯಮಗಳನ್ನು ರಚಿಸಿ ನಿಯಮದಂತೆ ಶೈಕ್ಷಣಿಕ ಮಂಡಳಿ, ಹಣಕಾಸು ಸಮಿತಿ ಹಾಗೂ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದ ನಂತರ ಸರ್ಕಾರದ ಮುಖಾಂತರ ಘನತೆವೆತ್ತ ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರುಗಳು ಪರಿಶೀಲಿಸಿ ಸಲ್ಲಿಸಿರುವ ಎರಡು ಪರಿನಿಯಮಗಳನ್ನು ಶೈಕ್ಷಣಿಕ ಮಂಡಳಿಯ ಮುಂದೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

<u>ತೀರ್ಮಾನ</u> : **ಸದರಿ ಪರಿನಿಯಮಗಳನ್ನು ಒಪ್ಪಲಾಯಿತು. ಸದರಿ ಪರಿನಿಯಮಗಳನ್ನು ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯೊಂದಿಗೆ ಸರ್ಕಾರದ ಮುಖಾಂತರ ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಲು ಒಪ್ಪಲಾಯಿತು.**

## ವಿಷಯ ಸಂಖ್ಯೆ: 17.16

**ವಿಷಯ**: ಕರಾಮುವಿಯಲ್ಲಿ 2001-02 ರಿಂದ 2013-14 ರವರೆಗೆ ವಿವಿಧ ಶಿಕ್ಷಣಕ್ರಮಗಳಿಗೆ ಪ್ರವೇಶಾತಿ ಪಡೆದು ಪರೀಕ್ಷೆ ತೆಗೆದು ಕೊಂಡಿಲ್ಲದ/ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮತ್ತೊಂದು ಬಾರಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡುವ ಬಗೆಗೆ.

*****

ಕರಾಮುವಿಯಲ್ಲಿ 2001-02 ರಿಂದ 2013-14 ರವರೆಗೆ ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಪಡೆದು ಪರೀಕ್ಷೆ ತೆಗೆದುಕೊಂಡಿಲ್ಲದ/ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ ಒಂದು ಬಾರಿ ಪೂರಕ ಪರೀಕ್ಷೆಗಳನ್ನು ನಡೆಸಲು 10 ಮತ್ತು 14ನೇ ಶೈಕ್ಷಣಿಕ ಮಂಡಳಿ ಸಭೆ ಹಾಗೂ 157 ಮತ್ತು 158ನೇ ವ್ಯವಸ್ಥಾಪನಾ ಮಂಡಳಿ ಸಭೆಯು ಅನುಮೋದನೆ ನೀಡಿದ ಹಿನ್ನೆಲೆಯಲ್ಲಿ ಪರೀಕ್ಷಾ ಅಧಿಸೂಚನೆ ಹೊರಡಿಸಿ 2020ರ ವಿವಿಧ ಮಾಹೆಗಳಲ್ಲಿ ಪರೀಕ್ಷೆಗಳನ್ನು ನಡೆಸಿ ಫಲಿತಾಂಶವನ್ನು ಪ್ರಕಟಿಸಲಾಗಿರುತ್ತದೆ. ಸದರಿ ಪರೀಕ್ಷೆಗಳು ನಡೆಯುವ ಸಮಯದಲ್ಲಿ ಕೋವಿಡ್-19 ಸಾಂಕ್ರಮಿಕ ರೋಗದಿಂದಾಗಿ ಲಾಕ್‌ಡೌನ್, ನೆರೆಹಾವಳಿ ಹಾಗೂ ಸಾರಿಗೆ ಸಮಸ್ಯೆಯಿಂದಾಗಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗಿರುವುದಿಲ್ಲ ಪುನಃ ಪರೀಕ್ಷೆ ಬರೆಯಲು ಮತ್ತೊಂದು ಅವಕಾಶ ಕಲ್ಪಿಸಿಕೊಡಬೇಕೆಂದು ಮಾನ್ಯ ಕುಲಸಚಿವರು (ಪರೀಕ್ಷಾಂಗ)ರವರನ್ನು ವಿದ್ಯಾರ್ಥಿಗಳು ಬೇಟಿ

**ಕುಲಸಚಿವರು** **ಕುಲಪತಿಗಳು**

ಮಾಡಿ ಮನವಿ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಈ ಸಂಬಂಧ ಮಾನ್ಯ ಕುಲಪತಿಗಳೊಂದಿಗೆ ಸಮಾಲೋಚನೆ ಮಾಡಿ ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಚಾಲ್ತಿಯಲ್ಲಿರುವ ಪಠ್ಯಗಳನುಸಾರ ಪರೀಕ್ಷೆಗಳನ್ನು ನಡೆಸುವುದು ಸೂಕ್ತವೆಂದು ಭಾವಿಸಿ ಮತ್ತೊಂದು ಬಾರಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡುವ ಹಿನ್ನೆಲೆಯಲ್ಲಿ ಪ್ರಸ್ತುತ ಚಾಲ್ತಿ ಇರುವ ಶುಲ್ಕವನ್ನು ನಿಗಧಿಪಡಿಸಿ ಪರೀಕ್ಷಾ ಅಧಿಸೂಚನೆ ಹೊರಡಿಸಿ ಪರೀಕ್ಷೆಗಳನ್ನು ನಡೆಸುವ ಸಂಬಂಧ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

<u>ತೀರ್ಮಾನ</u> : **ಕರಾಮುವಿಯಲ್ಲಿ 2001-02 ರಿಂದ 2013-14 ರವರೆಗೆ ವಿವಿಧ ಶಿಕ್ಷಣಕ್ರಮಗಳಿಗೆ ಪ್ರವೇಶಾತಿ ಪಡೆದು ಪರೀಕ್ಷೆ ತೆಗೆದು ಕೊಂಡಿಲ್ಲದ/ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮತ್ತೊಂದು ಬಾರಿ ಪರೀಕ್ಷೆ ಬರೆಯಲು ಅಂತಿಮ ಅವಕಾಶಗಳನ್ನು ನೀಡಲು ಒಪ್ಪಲಾಯಿತು.**

## ವಿಷಯ ಸಂಖ್ಯೆ: 17.17

**ವಿಷಯ**: ವಿಶ್ವವಿದ್ಯಾನಿಲಯದ ವಿವಿಧ ಪದವಿಗಳ ಪರೀಕ್ಷಾ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಪರಿಷ್ಕರಿಸುವ ಬಗೆಗೆ.

* * * * *

ವಿಶ್ವವಿದ್ಯಾನಿಲಯವು ನಡೆಸುವ ವಿವಿದ ಪದವಿ ಪರೀಕ್ಷೆಗಳ ಪರೀಕ್ಷಾ ಶುಲ್ಕಗಳನ್ನು ಈ ಹಿಂದೆ 2015ನೇ ಸಾಲಿನಲ್ಲಿ ಪರಿಷ್ಕರಿಸಿ ಜಾರಿಗೆ ತರಲಾಗಿತ್ತು. ನಂತರದಲ್ಲಿ ಪರೀಕ್ಷಾ ಶುಲ್ಕ ಹಾಗೂ ಇತರೆ ಶುಲ್ಕಗಳಲ್ಲಿ ಯಾವುದೇ ಪರಿಷ್ಕರಣೆ ಮಾಡಿರುವುದಿಲ್ಲ. ಈ ಸಂಬಂಧ ವಿವಿದ ಪದವಿ ಪರೀಕ್ಷೆಗಳ ಪರೀಕ್ಷಾ ಶುಲ್ಕಗಳನ್ನು ಪರಿಷ್ಕರಿಸುವ ಸಂಬಂಧವಾಗಿ ಕುಲಸಚಿವರು (ಪರೀಕ್ಷಾಂಗ) ರವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲು ಮಾನ್ಯ ಕುಲಪತಿಯವರು ದಿನಾಂಕ: 17.06.2021 ರಂದು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಅಧ್ಯಕ್ಷರನ್ನೊಳಗೊಂಡಂತೆ ಐದು ಸದಸ್ಯರ ತಂಡವನ್ನು ರಚಿಸಲಾಗಿತ್ತು. ಸದರಿ ಪರೀಕ್ಷಾ ಶುಲ್ಕ ಪರಿಷ್ಕರಣಾ ಸಮಿತಿಯು ಸಭೆ ಸೇರಿ 2015ನೇ ಸಾಲಿನಲ್ಲಿ ಪರಿಷ್ಕರಿಸಿರುವ ವಿಶ್ವವಿದ್ಯಾನಿಲಯದ ವಿವಿದ ಪದವಿ ಪರೀಕ್ಷೆಗಳ ಪರೀಕ್ಷಾ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಶೇಕಡ 25%ರಷ್ಟು ಹೆಚ್ಚಳ ಮಾಡಿ ಪ್ರಸ್ತುತ ನಡೆಸುವ ಪರೀಕ್ಷೆಗಳಿಂದ ಜಾರಿಗೆ ತರಲು ವರದಿ ನೀಡಿದ್ದು, ಸದರಿ ವರದಿಯನುಸಾರ ಕ್ರಮವಹಿಸುವ ಸಂಬಂಧದ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ. (ಪ್ರತಿ ಲಗತ್ತಿಸಿದೆ)

<u>ತೀರ್ಮಾನ</u> : ವಿಶ್ವವಿದ್ಯಾನಿಲಯದ ವಿವಿಧ ಪದವಿಗಳ ಪರೀಕ್ಷಾ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಪರಿಷ್ಕರಿಸಲು ಒಪ್ಪಲಾಯಿತು. ನಾಲ್ಕನೇ ಸೆಮಿಸ್ಟರ್‌ನಲ್ಲಿ ನಡೆಸುವಂತ ಪ್ರಾಜೆಕ್ಟ್, ವೈವಾ ಕಾರ್ಯಕ್ರಮಗಳಿಗೆ, ಮೂರನೇ ಸೆಮಿಸ್ಟರ್‌ಗೆ ನಿಗದಿಪಡಿಸಿರುವ ಪರೀಕ್ಷಾ ಶುಲ್ಕಕ್ಕಿಂತ ರೂ.200/- ಗಳನ್ನು ಹೆಚ್ಚುವರಿಯಾಗಿ ನಿಗದಿಪಡಿಸಲು ತೀರ್ಮಾನಿಸಲಾಯಿತು.

ಕುಲಸಚಿವರು ಕುಲಪತಿಗಳು

## ವಿಷಯ ಸಂಖ್ಯೆ: 17.18

**ವಿಷಯ** : ಕರಾಮುವಿಯ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಿಗೆ ಅವಶ್ಯವಿರುವ ಅತಿಥಿ ಉಪನ್ಯಾಸಕರ ಬಗೆಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಿಗೆ UGC ODL & OL Regulations 2020 Annexure IV, Section I. A.(i) (ii) ರ ಪ್ರಕಾರ ನಿರ್ದಿಷ್ಟ ಸಂಖ್ಯೆಯ ಅಧ್ಯಾಪಕರಿರಬೇಕಾಗಿರುತ್ತದೆ. ಆದರೆ, ಕೆಲವು ವಿಭಾಗಗಳಲ್ಲಿ ಅಧ್ಯಾಪಕರ ಸಂಖ್ಯೆ ಯುಜಿಸಿ ನಿಯಮಕ್ಕೆ ಹೋಲಿಸಿದಲ್ಲಿ ಕಡಿಮೆ ಇದ್ದು ಕಾರ್ಯಭಾರವು ಕೂಡ ಹೆಚ್ಚಿರುವುದನ್ನು ವಿವಿಧ ಅಧ್ಯಯನ ವಿಭಾಗಗಳ ಮುಖ್ಯಸ್ಥರು ಕೋರಿಕೆ ಪತ್ರಗಳನ್ನು ಡೀನ್ (ಶೈಕ್ಷಣಿಕ) ವಿಭಾಗಕ್ಕೆ ಸಲ್ಲಿಸಿರುತ್ತಾರೆ. ಅವಶ್ಯವಿರುವ ಅತಿಥಿ ಉಪನ್ಯಾಸಕರ ಕ್ರೋಡೀಕೃತ ಪಟ್ಟಿಯನ್ನು (ಅನುಬಂಧ–1 ರಲ್ಲಿ ಲಗತ್ತಿಸಿದೆ).

ಅತಿಥಿ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆ ಸಂಬಂಧ ಆಡಳಿತಾತ್ಮಕ ವಿಭಾಗದಲ್ಲಿರುವ ವಿ.ವಿ.ಯಲ್ಲಿ ಅಧ್ಯಾಪಕರ Sanctioned Post ಗೆ ಅನುಗುಣವಾಗಿ ನಿಯಮಗಳನ್ನು ಪಾಲಿಸಿ, ಶಾಸನಬದ್ಧ ಪ್ರಾಧಿಕಾರಿಗಳ ಅನುಮೋದನೆಯೊಂದಿಗೆ, ನಿಯಮಾನುಸಾರ ಕ್ರಮವಹಿಸಲು ಆಡಳಿತಾತ್ಮಕ ವಿಭಾಗಕ್ಕೆ ಸೂಚಿಸುವ ಸಂಬಂಧ ಚರ್ಚೆ ಮತ್ತು ನಿರ್ಣಯಕ್ಕಾಗಿ 17ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಿದೆ.

**<u>ಚರ್ಚೆ</u> : UGC ಗೆ ಹೊಸದಾಗಿ ಆರಂಭಿಸಲು ಉದ್ದೇಶಿಸಿರುವ ODL ಮತ್ತು OL ಕಾರ್ಯಕ್ರಮಗಳ ಪ್ರಸ್ತಾವನೆ ಸಲ್ಲಿಸಿದ್ದು UGC ಅವರು ಪ್ರತಿ ಶೈಕ್ಷಣಿಕ ಕಾರ್ಯಕ್ರಮ ನಡೆಸಲು ವಿಭಾಗದಲ್ಲಿ ಕನಿಷ್ಠ ಮೂರು ಜನ ಅಧ್ಯಾಪಕರಿರಬೇಕು ಎಂದು ತಿಳಿಸಿ ಪ್ರಸ್ತಾವನೆಯನ್ನು ವಿಲೆ ಇಟ್ಟಿರುತ್ತಾರೆ. ಈ ಹಿನ್ನೆಲೆಯಲ್ಲಿ ಹೊಸದಾಗಿ Assistant Professors on Contractual Basis ನ ಮೇಲೆ ನೇಮಕ ಮಾಡಿಕೊಳ್ಳುವ ಅಗತ್ಯವಿದೆ ಎಂಬುದನ್ನು ಗಮನಿಸಲಾಯಿತು. ಅತಿಥಿ ಉಪನ್ಯಾಸಕರು ಎಂದು ನೇಮಕ ಮಾಡಿದಲ್ಲಿ ಅದನ್ನು UGC ಒಪ್ಪುವುದಿಲ್ಲ ಎಂಬ ಅಂಶವನ್ನು ಗಮನಿಸಲಾಯಿತು. ಹೊಸದಾಗಿ ನೇಮಕಾತಿ ಮಾಡಲು ಉದ್ದೇಶಿಸಿರುವ ಉಪನ್ಯಾಸಕರ ಸಂಖ್ಯೆಗಳನ್ನು ಅಂತಿಮವಾಗಿ ಪರಿಶೀಲಿಸಿ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆಗೆ ಸಲ್ಲಿಸಲು ತೀರ್ಮಾನಿಸಲಾಯಿತು.**

**<u>ತೀರ್ಮಾನ</u> : Assistant Professors on Contractual Basis ನ ಮೇಲೆ ನೇಮಕ ಮಾಡಿಕೊಳ್ಳಲು ಒಪ್ಪಲಾಯಿತು.**

**<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು</u>**

## ವಿಷಯ ಸಂಖ್ಯೆ: 17.19

**ವಿಷಯ** : ವಿ.ವಿ.ಯಲ್ಲಿ ನಡೆಸಲಾಗುವ ಎಲ್ಲಾ ಸಭೆಗಳ ನಡಾವಳಿಗಳನ್ನು ದಾಖಲಿಸಲು ಸ್ಟೆನೋಗಳಿಗೆ (ಶೀಘ್ರಲಿಪಿಗಾರರು) ಜವಾಬ್ದಾರಿ ನೀಡುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಈ ಹಿಂದೆ ಸ್ಟೆನೋಗಳಾಗಿ (ಶೀಘ್ರಲಿಪಿಗಾರರು) ನೇಮಕಗೊಂಡಿದ್ದು, ಪ್ರಸ್ತುತ, ಬಡ್ತಿ ಪಡೆದು ವಿ.ವಿ.ಯಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ, ವಿ.ವಿ.ಯಲ್ಲಿನ ಶಾಸನಬದ್ಧ ಅಧಿಕಾರಿಗಳ ಕಚೇರಿಗಳಲ್ಲಿ ನಡೆಯುವ ವಿವಿಧ ಸಭೆಗಳ ನಡಾವಳಿಗಳನ್ನು ದಾಖಲಿಸಿಕೊಳ್ಳಲು ಶೀಘ್ರಲಿಪಿಗಾರರ ಕೊರತೆಯಿರುತ್ತದೆ. ಹಾಗಾಗಿ, ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

ಕುಲಸಚಿವರು

ಕುಲಪತಿಗಳು

<u>ತೀರ್ಮಾನ</u> : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಈ ಹಿಂದೆ ಸ್ಟೆನೋಗಳಾಗಿ (ಶೀಘ್ರಲಿಪಿಗಾರರು) ನೇಮಕಗೊಂಡು, ಪ್ರಸ್ತುತ, ಬಡ್ತಿ ಪಡೆದು ವಿ.ವಿ.ಯಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಆವರ್ತನ ಆಧಾರದ ಮೇಲೆ ವಿ.ವಿ.ಯಲ್ಲಿ ನಡೆಸಲಾಗುವ ಎಲ್ಲಾ ಸಭೆಗಳ ನಡಾವಳಿಗಳನ್ನು ದಾಖಲಿಸಿಕೊಳ್ಳಲು ಆಡಳಿತ ವಿಭಾಗದಿಂದ ಕಚೇರಿ ಆದೇಶ ಹೊರಡಿಸಲು ತೀರ್ಮಾನಿಸಲಾಯಿತು. ಈ ನೌಕರರಿಗೆ ಈಗಾಗಲೇ ನಿರ್ವಹಿಸುತ್ತಿರುವ ಕಾರ್ಯಗಳ ಜೊತೆ ಹೆಚ್ಚುವರಿಯಾಗಿ ಸದರಿ ಕೆಲಸಗಳನ್ನು ನಿರ್ವಹಿಸುವಂತೆ ತಿಳಿಸಲು ತೀರ್ಮಾನಿಸಲಾಯಿತು.

## ವಿಷಯ ಸಂಖ್ಯೆ: 17.20

ವಿಷಯ : ವಿ.ವಿ.ಯ ಅಧ್ಯಾಪಕರುಗಳಿಗೆ ನಿಗದಿಪಡಿಸಲಾಗಿದ್ದ ವರ್ಕ್‌ಲೋಡ್‌ನ್ನು ಪರಿಷ್ಕರಿಸಿರುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಈ ಹಿಂದೆ ಅಧ್ಯಾಪಕರುಗಳಿಗೆ ವರ್ಕ್‌ಲೋಡ್‌ನ್ನು ನಿಗದಿಪಡಿಸಿದ್ದು, ಪ್ರಸ್ತುತ ಅಧ್ಯಾಪಕರು ಆಡಿಯೋ ವೀಡಿಯೋ ಕಾರ್ಯಕ್ರಮಗಳನ್ನು ಸಹ ನೀಡಬೇಕಾಗಿದ್ದು ಇದನ್ನು ಸಹ ವರ್ಕ್‌ಲೋಡ್‌ನಲ್ಲಿ ಸೇರಿಸಿ, ನಿಗದಿತ ವರ್ಕ್‌ಲೋಡ್‌ನ್ನು ಪರಿಷ್ಕರಿಸಲಾಗಿರುತ್ತದೆ. ಪರಿಷ್ಕೃತ ವರ್ಕ್‌ಲೋಡ್‌ನ್ನು ದಿನಾಂಕ: 11-01-2021 ರಂದು ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅವಗಾಹನೆಗೆ ಹಾಗು ಸಲಹೆಗಳಿಗಾಗಿ ಕಳುಹಿಸಲಾಗಿತ್ತು. ವಿಭಾಗಗಳಿಂದ ಬಂದ ಸಲಹೆಗಳನ್ನು ಅಳವಡಿಸಿ ವರ್ಕ್‌ಲೋಡ್‌ನ್ನು ಪರಿಷ್ಕರಿಸಲಾಗಿದೆ. ಹಾಗಾಗಿ, ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

<u>ತೀರ್ಮಾನ</u> : ಪರಿಷ್ಕೃತ ವರ್ಕ್‌ಲೋಡ್‌ನ್ನು ಒಪ್ಪಲಾಯಿತು.

## ವಿಷಯ ಸಂಖ್ಯೆ: 17.21

ವಿಷಯ : ವಿ.ವಿ.ಯಲ್ಲಿ ಎರಡನೇ ಹಾಗೂ ನಾಲ್ಕನೇ ಶನಿವಾರದ ರಜಾಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರಾದ್ಯಂತ ವ್ಯಾಪಿಸಿರುವ ಕೋವಿಡ್-19 ಮಹಾಮಾರಿಯಿಂದ ಅನೇಕ ಚಟುವಟಿಕೆಗಳು ಮಂದಗತಿಯಲ್ಲಿ ಸಾಗುತ್ತಿದ್ದು ಇದನ್ನು ಸರಿದೂಗಿಸಲು ಇನ್ನುಮುಂದೆ ವಿ.ವಿ.ಯಲ್ಲಿ ಎರಡನೇ ಹಾಗೂ ನಾಲ್ಕನೇ ಶನಿವಾರದ ರಜಾಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸುವ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

<u>ತೀರ್ಮಾನ</u> : ವಿ.ವಿ.ಯಲ್ಲಿ ಎರಡನೇ ಹಾಗೂ ನಾಲ್ಕನೇ ಶನಿವಾರದ ರಜಾಗಳನ್ನು ಮುಂದಿನ ಆದೇಶದವರೆವಿಗೆ ಕರ್ತವ್ಯದ ದಿನಗಳೆಂದು ಪರಿವರ್ತಿಸಲು ತೀರ್ಮಾನಿಸಲಾಯಿತು.

ಕುಲಸಚಿವರು ಕುಲಪತಿಗಳು

## ವಿಷಯ ಸಂಖ್ಯೆ: 17.22

**ವಿಷಯ :** ಒಂದು ವರ್ಷದ ಪಿ.ಜಿ.ಡಿಪ್ಲೊಮಾ ಕಾರ್ಯಕ್ರಮಗಳನ್ನು ಪರಿಗಣಿಸುವ ಬಗ್ಗೆ ಯುಜಿಸಿಗೆ ಪತ್ರ ಬರೆಯುವ ಕುರಿತು.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಜನವರಿ 2020–21ನೇ ಶೈಕ್ಷಣಿಕ ಸಾಲಿನಲ್ಲಿ ಈ ಹಿಂದೆ ನಡೆಸುತ್ತಿದ್ದ ಒಂದು ವರ್ಷದ ಪಿ.ಜಿ.ಡಿಪ್ಲೊಮಾ ಕಾರ್ಯಕ್ರಮಗಳನ್ನು ಒಂದು ವರ್ಷದ ಜಿ.ಬಿ.ಡಿಪ್ಲೊಮಾ ಕಾರ್ಯಕ್ರಮವೆಂದು ಬದಲಾಯಿಸಿ ಪ್ರಾರಂಭಿಸಲಾಗಿತ್ತು. ಆದರೆ ಪ್ರವೇಶಾತಿಯಲ್ಲಿ ಗಣನೀಯವಾಗಿ ಇಳಿಕೆ ಕಂಡುಬಂದಿರುತ್ತದೆ. ಅಲ್ಲದೆ, NAAC ಮಾನ್ಯತೆ ಪಡೆಯಲು ನೀಡಿರುವ ವಿಷಯ ಸೂಚಿಗಳ ಅನುಸಾರ 1.2.4 Enabling provision for modular approach ಎಂದು ಸ್ನಾತಕೋತ್ತರ ಕಾರ್ಯಕ್ರಮಗಳನ್ನು ಒಂದು ವರ್ಷ ಪೂರೈಸಿ ಕಾರಣಾಂತರಗಳಿಂದ ಪೂರ್ಣಗೊಳಿಸದ ವಿದ್ಯಾರ್ಥಿಗಳಿಗೂ ಸಹ Flexible Exit option ನೀಡಬೇಕಾಗಿರುತ್ತದೆ. ಅದರಂತೆ, ಒಂದು ವರ್ಷದ ಪಿ.ಜಿ.ಡಿಪ್ಲೊಮಾ ಕಾರ್ಯಕ್ರಮಗಳನ್ನು ನಡೆಸುವುದು ಸೂಕ್ತವಾಗಿರುತ್ತದೆ. ಅಲ್ಲದೆ ಅನೇಕ ಸರ್ಕಾರಿ ಹಾಗು ಖಾಸಗಿ ಸಂಸ್ಥೆಗಳಲ್ಲಿ ಒಂದು ವರ್ಷದ ಪಿ.ಜಿ.ಡಿಪ್ಲೊಮಾ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಿದವರಿಗೆ ಉದ್ಯೋಗ ಹಾಗು ಪದೋನ್ನತಿ ನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

**ಚರ್ಚೆ : UGC (ODL and OL) Regulation – 2020 ಅನುಸಾರ ಪಿ.ಜಿ.ಡಿಪ್ಲೊಮಾ ಕಾರ್ಯಕ್ರಮಗಳು ಎರಡು ವರ್ಷದಾಗಿರಬೇಕಾಗಿರುತ್ತದೆ.**

**ತೀರ್ಮಾನ : ವಿಶ್ವವಿದ್ಯಾನಿಲಯದ ವತಿಯಿಂದ ನಡೆಸುವ ಒಂದು ವರ್ಷದ ಪಿ.ಜಿ.ಡಿಪ್ಲೊಮಾ ಕಾರ್ಯಕ್ರಮಗಳನ್ನು ಪರಿಗಣಿಸುವ ಬಗ್ಗೆ ಯುಜಿಸಿಗೆ ಪತ್ರ ಬರೆಯಲು ತೀರ್ಮಾನಿಸಲಾಯಿತು.**

## ವಿಷಯ ಸಂಖ್ಯೆ: 17.23

**ವಿಷಯ :** Bherunda Innovation and Entrepreneurship Foundation ಇವರ ಸಹಯೋಗದಲ್ಲಿ ವಿ.ವಿ.ಯಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಹೆಚ್ಚಿಸುವುದರ ಕುರಿತು.

****

Bherunda Innovation and Entrepreneurship Foundation ಇದು HH Sri Yaduveer Krishnadatta Chamaraja Wadiyar, ಇವರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಗಿರುವ ಸಂಸ್ಥೆಯಾಗಿದೆ. ಇವರು ಕೇಂದ್ರ ಸರ್ಕಾರ ಹಾಗು ರಾಜ್ಯ ಸರ್ಕಾರದ ಸಹಯೋಗದಲ್ಲಿ ಅನೇಕ ಕಾರ್ಯಕ್ರಮಗಳನ್ನು ಮಾಡುತ್ತಿದ್ದು, ಪ್ರಸ್ತುತ, Cyber Security ಸಂಬಂಧಿತ ವಿಷಯಗಳಲ್ಲಿ ಸೆಮಿನಾರ್, ಕಾರ್ಯಾಗಾರಗಳನ್ನು ಹಾಗು ವಿವಿಧ ಉದ್ದಿಮೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ನಡೆಸಲು ಉದ್ದೇಶಿಸಿದೆ. ಕರಾಮುವಿಯಲ್ಲಿ R&D ಕೇಂದ್ರ ಸ್ಥಾಪಿಸಲು ಪ್ರಸ್ತಾವನೆ ನೀಡಿದೆ. ಈ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

**ತೀರ್ಮಾನ : Bherunda Innovation and Entrepreneurship Foundation ಇವರ ಜೊತೆ MOU ಮಾಡಿಕೊಂಡು ತನ್ಮೂಲಕ ಸಂಶೋಧನಾ ಚಟುವಟಿಕೆಗಳನ್ನು ಹೆಚ್ಚಿಸಲು ತೀರ್ಮಾನಿಸಲಾಯಿತು.**

ಕುಲಸಚಿವರು ಹಾಗು
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗು ಅಧ್ಯಕ್ಷರು